**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 344/2014**

**ಸಾಕ್ಷಿಗೆ ದಿನಾಂಕ 30.9.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹದೇವ | ಪಿ.ಡಬ್ಲ್ಯೂ-3 |
| ತಂದೆಯ/ಗಂಡನ ಹೆಸರು | : | ಮಾರ | ಸಿ.ಡಬ್ಲ್ಯೂ-9 |
| ವಯಸ್ಸು | : | 49 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಹುಣಸೆಕುಪ್ಪೆ ಹಾಡಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2003-04 ಮತ್ತು 2004-05 ನೇ ಸಾಲಿನಲ್ಲಿ ಲ್ಯಾಂಪ್ ಸೊಸೈಟಿಯ ನಿರ್ದೇಶನಕಾಗಿದ್ದೆನು. ನಿಂಗರಾಜು ಎಂಬುವವರು ಸದರಿ ಸೊಸೈಟಿಯಲ್ಲಿ 2003-04 ಮತ್ತು 2004-05 ನೇ ಸಾಲಿನಲ್ಲಿ ಗುಮಾಸ್ತರಾಗಿದ್ದರು. 2013-14 ನೇ ಸಾಲಿನಲ್ಲಿ ಚಾಸ 14 ರವರು ಸದರಿ ಸೊಸೈಟಿಯಲ್ಲಿ ಅವ್ಯವಹಾರವಾಗಿರುತ್ತದೆ ಎಂದು ಹೇಳಿದ್ದು, ಯಾರು ಮತ್ತು ಎಷ್ಟು ಹಣವನ್ನು ಅವ್ಯವಹಾರ ಮಾಡಿರುತ್ತಾರೆ ಎಂದು ಹೇಳಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ ಎಪಿಪಿ ರವರಿಂದಃ**

2003-04 ನೇ ಸಾಲಿನಲ್ಲಿ ನಾನು ನಿರ್ದೇಶಕನಾಗಿದ್ದಾಗ ನಮ್ಮ ಸೊಸೈಟಿಯ ಗುಮಾಸ್ತನಾಗಿದ್ದ ನಿಂಗರಾಜು ಈತನು ಆಡಳಿತ ಮಂಡಳಿಯಲ್ಲಿ ನಿರ್ಣಯಿಸಿದಕ್ಕಿಂತ ಕಡಿಮೆ ಬೆಲೆಗೆ ಮರದ ಪಾಚಿಯನ್ನು ಮಾರಾಟ ಮಾಡಿ ಸಂಘದ ದಾಖಲಾತಿಗಳಲ್ಲಿ ನಮೂದು ಮಾಡದೇ ಒಟ್ಟು 14,712/- ರೂ.ಗಳನ್ನು ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿ 2004-05 ನೇ ಸಾಲಿನಲ್ಲಿ ಸಹ ಸದರಿ ಸಂಘದ ಮಾರಾಟ ಗುಮಾಸ್ತನಾಗಿದ್ದ ನಿಂಗರಾಜು ಈತನು ಆಡಳಿತ ಮಂಡಳಿಯಲ್ಲಿ

ನಿರ್ಣಯಿಸಿದಕ್ಕಿಂತ ಕಡಿಮೆ ಬೆಲೆಗೆ ಮರದ ಪಾಟಿಯನ್ನು ಮಾರಾಟ ಮಾಡಿ ಸಂಘದ ದಾಖಲಾತಿಗಳಲ್ಲಿ ನಮೂದು ಮಾಡದೇ ಒಟ್ಟು 10,78,174/- ರೂ.ಗಳನ್ನು ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಿಕೊಳ್ಳದ ಹೇಳಿಕೆಯ ಭಾಗವನ್ನು ನಿಪಿ3 ಎಂದು ಗುರುತಿಸಲಾಯಿತು. ಸದರಿ ವಿಚಾರಗಳು ಗೊತ್ತಿದ್ದು ನಿಪಿ3 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ ಏನೂ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ